CC-0 In Public Domain. Digitized by eGangotri

ಸ್ವಾತಂತ್ರ್ಯದ ಮುನ್ನಡೆ

ರಾಷ್ಟ್ರೀಯ ಜಾಗೃತಿ



Sri Vidyabharathi ... Centre, Sringeri

* ಮೂಲ: ಇಂಪೀರಿಯಲ್ ಗೆಜೆಟಿಯರ್ ಆಫ್ ಇಂಡಿಯಾ, 1909 ಪುಟ 48-49

CC-O. In Public Domain. Digitized by eGangotri



Sri Jayabharathi Book Centre, Sringeri

CC-0. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri



* 1905ನೇ ಇಸವಿ.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri

CC-0. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

* ಬ್ರಾಹ್ಮಣರ ದೀರ್ಘಕಾಲಿಕ ಸಂಪರ್ಕದಿಂದ [illegible] ಉನ್ನತ ಸಾಮಾಜಿಕ ಅಂತಸ್ತು ಪಡೆದಿದ್ದ ಶೂದ್ರರ ಒಂದು ಪಂಗಡ.

CC-0. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-0. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sri

CC-O. In Public Domain. Digitized by eGangotri

Sri

CC-O. In Public Domain. Digitized by eGangotri

Sri Vidyabharati ... Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidya... Gangotri

CC-O. In Public Domain. Digitized by eGangotri



Sri Vidyabharati Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri





Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyashankara Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyaprakash Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವದೇಶೀ ಔದ್ಯಮಿಕ ಸಾಹಸ

ಹದಿನೆಂಟನೆಯ ಶತಮಾನದಲ್ಲಿ ರೇಲ್ವೆ ಬೋಗಿಗಳಿಗೆ ಹಾಗೂ ನೇಯ್ಗೆ ಮಗ್ಗಗಳಿಗೆ ಚಾಲನೆ ನೀಡಿದ ಉಗಿಯಂತ್ರದ ಆವಿಷ್ಕಾರದೊಡನೆ ಯುರೋಪಿನಲ್ಲಿ ಕೈಗಾರಿಕಾ ಕ್ರಾಂತಿಯು ಆರಂಭವಾಯಿತು. ಭಾರತದಲ್ಲಿ ತಮ್ಮ ವಸ್ತುಗಳಿಗೆ ಮಾರುಕಟ್ಟೆ ದೊರೆಯಬೇಕೆನ್ನುವ ಉದ್ದೇಶದಿಂದ ಬ್ರಿಟಿಷರು ಇಲ್ಲಿನ ದೇಶೀ ಉದ್ಯಮಗಳನ್ನು ನಾಶಗೊಳಿಸಿದರು. ಭಾರತ ತನ್ನ ಅಗತ್ಯಗಳಿಗೆ ಐರೋಪ್ಯ ರಾಷ್ಟ್ರಗಳ ಮೇಲೆಯೇ ಅವಲಂಬಿತವಾಗುವಂತೆ, ಅದು ಕೈಗಾರಿಕಾ ಕ್ಷೇತ್ರದಲ್ಲಿ ಹಿಂದುಳಿಯುವಂತೆ ಅವರು ನೋಡಿಕೊಂಡರು. ಭಾರತವನ್ನು ಪ್ರಪಂಚದ ಕೈಗಾರಿಕಾ ಭೂಪಟದಿಂದ ಹೊರಗುಳಿಯುವಂತೆಯೇ ಮಾಡಬೇಕೆನ್ನುವ ಅವರ ಸಕಲ ಪ್ರಯತ್ನಗಳ ನಡುವೆಯೂ, 1905ರಲ್ಲಿ ಚಿಕ್ಕ ಪ್ರಮಾಣದಲ್ಲಾದರೂ ಕೈಗಾರಿಕಾ ಕ್ರಾಂತಿ ಆರಂಭವಾಯಿತು. ಯುರೋಪಿನಲ್ಲಿ ಉಗಿಶಕ್ತಿ ಕೈಗಾರಿಕಾ ಕ್ರಾಂತಿಯನ್ನು ಆರಂಭಿಸಿದರೆ, ಭಾರತದಲ್ಲಿ ಸ್ವದೇಶೀ ಚಳುವಳಿ ಅದನ್ನು ಆರಂಭಿಸಿತು.



ಸ್ವದೇಶೀ ಚಳುವಳಿ ಆರಂಭವಾಗುವುದಕ್ಕೆ ಬಹು ಮುಂಚೆಯೇ ರಮೇಶ್‌ಚಂದ್ರ ದತ್ತರು ಸ್ವದೇಶೀ ಉದ್ಯಮದ ಪ್ರಚಾರ ನಡೆಸಿದ್ದರು. 1867ರಲ್ಲಿ ಕಿಶೋರಿಲಾಲ್ ಮುಖರ್ಜಿಯವರು ಸಿಬ್‌ಪುರ್ ಐಯರ್ನ್ ವರ್ಕ್ಸ್ ಆರಂಭಿಸಿದರು. ಅದೇ ವರ್ಷ ಕಲ್ಕತ್ತೆಯ ಒಂದು ಹಿಂದೂ ಜಾತ್ರೆಯಲ್ಲಿ ಸ್ವದೇಶೀ ಕರಕುಶಲ ಸರಕುಗಳ ಪ್ರದರ್ಶನ ಹಾಗೂ ಮಾರಾಟ ನಡೆಸಲಾಯಿತು. 1893ರಲ್ಲಿ ಪ್ರಫುಲ್ಲಚಂದ್ರ ರೇ ತಮ್ಮ ಬೆಂಗಾಲ್ ಕೆಮಿಕಲ್ಸ್ ಆರಂಭಿಸಿದರು. ಅನಂತರ ಅವರು ನುಡಿದರು : "ನಮ್ಮ ವಿದ್ಯಾವಂತ ಯುವಕರು ಕಾಲೇಜುಗಳಿಂದ ಹೊರಬಂದೊಡನೆ ಸರಕಾರದಲ್ಲಿ ಅಥವಾ ಯುರೋಪಿನ ವಾಣಿಜ್ಯ ಸಂಸ್ಥೆಗಳಲ್ಲಿ ಹಗುರವಾದ ಕೆಲಸ ಹುಡುಕುತ್ತಿದ್ದಾರೆ. ಎಲ್ಲ ಉದ್ಯೋಗಾವಕಾಶಗಳೂ ಜನನಿಬಿಡವಾಗುತ್ತಿವೆ. ಕೆಲವರು ಎಂಜಿನಿಯರಿಂಗ್ ಪದವೀಧರರೂ ಉದ್ಯೋಗಾರ್ಥಿಗಳಾಗಿದ್ದಾರೆ. ...ಈ ಎಲ್ಲಾ ಯುವಕರನ್ನು ಏನು ಮಾಡಬೇಕು ? ಮಧ್ಯಮವರ್ಗದ ಹೊಟ್ಟೆಗಿಲ್ಲದ ಯುವಕರ ಅನ್ನದ ದಾರಿ ಯಾವುದು ?"

ಪ್ರಫುಲ್ಲಚಂದ್ರ ರೇ ಬೆಂಗಾಲ್ ಕೆಮಿಕಲ್ಸ್ ಆರಂಭಿಸಿ ವಿದ್ಯಾವಂತ ಯುವಕರಿಗೆ ಕೆಲಸ ಕೊಡಲು ಆರಂಭಿಸಿದರು. 1905ಕ್ಕೆ ಮುಂಚೆಯೇ ಅಹಮದಾಬಾದ್ ಮತ್ತು ಮುಂಬೈಗಳಲ್ಲಿ ಹತ್ತಿ ನೂಲು ತೆಗೆಯುವ ಕೆಲವು ಮಿಲ್‌ಗಳು ಕಾರ್ಯಾರಂಭ ಮಾಡಿದ್ದವು.

ಸ್ವದೇಶೀ ಉದ್ಯಮದ ಸಾಹಸಕ್ಕೆ ಸ್ವದೇಶೀ ಚಳುವಳಿ ಸಹಾಯಕವಾಗಿ ಬಂದಿತು. ಗುಣಮಟ್ಟದಲ್ಲಿ ಕಡಿಮೆ ಇದ್ದರೂ, ಹೆಚ್ಚಿನ ಬೆಲೆ ತೆರಬೇಕಾಗಿ ಬಂದರೂ, ವಿದೇಶೀ ವಸ್ತುಗಳ ಬದಲಿಗೆ ಸ್ವದೇಶೀ ವಸ್ತುಗಳನ್ನೇ ಕೊಂಡು ಪ್ರೋತ್ಸಾಹಿಸಬೇಕೆಂದು ನಮ್ಮ ದೇಶವಾಸಿಗಳಿಗೆ ಮನದಟ್ಟಾಗಿತ್ತು. ವಿದೇಶೀ ವಸ್ತುಗಳ ಬಹಿಷ್ಕಾರದೊಡನೆ, ಸ್ವದೇಶೀ ವಸ್ತುಗಳಿಗೆ ಬೇಡಿಕೆ ಹೆಚ್ಚಿತು. ಚಿಂತನಶೀಲರಾಗಿದ್ದು, ಧನಬಲ ಹೊಂದಿದ್ದ ಉತ್ಸಾಹಿಗಳು ಕಾಲಾನುಗುಣವಾಗಿ ನಡೆದುಕೊಂಡರು. ಸ್ವದೇಶೀ ವಸ್ತುಗಳನ್ನು ಮಾರಾಟ ಮಾಡುವ ಸ್ವದೇಶೀ ವಾಣಿಜ್ಯ ಮಳಿಗೆಗಳು ಹುಟ್ಟಿಕೊಂಡವು. ಮುಂಬೈ ಮತ್ತು ಅಹಮದಾಬಾದ್‌ಗಳ ಮಿಲ್ಲುಗಳಲ್ಲಿ ತಯಾರಾದ ನೂಲಿಗೆ ಭಾರೀ ಬೇಡಿಕೆ ಉಂಟಾಯಿತು. ಹಿತ್ತಾಳೆ ಹಾಗೂ ಕಂಚಿನ ಪಾತ್ರೆಗಳು ಆಮದು ಮಾಡಿಕೊಂಡ ಪಿಂಗಾಣಿ ಪಾತ್ರೆಗಳನ್ನು ಹೊರದೂಡಿದವು.

ಲೇಖನಿಗಳ ಮುಳ್ಳುಗಳ ಯುದ್ಧದಲ್ಲೂ ಸ್ವದೇಶೀ ಮುಳ್ಳುಗಳು ವಿಜಯ ಸಾಧಿಸಿದವು. ಸ್ವದೇಶೀ ಕಪ್ಪುಬಸಿಗಳು, ಪಾತ್ರೆಗಳು, ಮಸಿಕುಡಿಕೆಗಳು, ಗೊಂಬೆಗಳು ನಮ್ಮ ದೇಶವಾಸಿಯರ ಕಿಸೆಗಳನ್ನು ಸ್ವಾಧೀನ ಪಡಿಸಿಕೊಂಡವಷ್ಟೇ ಅಲ್ಲ, ವಿದೇಶೀ ಮಾರುಕಟ್ಟೆಯನ್ನೂ ಪ್ರವೇಶಿಸಿದವು ! ಮನಸ್ಸಿನ ತುಂಬಾ ಸ್ವದೇಶೀ ಯೋಚನೆಗಳೇ ತುಂಬಿರುವಾಗ ಮೈಯನ್ನು ವಿದೇಶೀ ಸಾಬೂನಿನಿಂದ ಸ್ವಚ್ಛಗೊಳಿಸಬಹುದಿತ್ತೇನು ? ಇಲ್ಲ. ಆದ್ದರಿಂದ ವಿದೇಶೀ ಮೈಸಾಬೂನುಗಳು ಲಗುಬಗನೆ ಸ್ವದೇಶೀ ಸಾಬೂನುಗಳಿಗೆ ಎಡೆಮಾಡಿಕೊಟ್ಟವು. ಯಜ್ಞಯಾಗಾದಿಗಳ ಪವಿತ್ರ ಅಗ್ನಿ, ಹಾಗೂ ಅಡುಗೆ ಮನೆಗಳಲ್ಲಿನ ಬೆಂಕಿಯನ್ನು ಸ್ವದೇಶೀ ಬೆಂಕಿಕಡ್ಡಿಗಳಿಂದ ಹೊತ್ತಿಸಲಾಯಿತು. ಸಿಗರೇಟು ಸೇದುವವರು ಸ್ವದೇಶೀ ಸಿಗರೇಟುಗಳನ್ನೇ

Sri Vidyabharathi Book Centre, Sringeri

CC-O. In Public Domain. Digitized by eGangotri

'ಸುಡ' ತೊಡಗಿದರು ! ಕಾಗದ, ಮೇಣಬತ್ತಿ, ಸಕ್ಕರೆ, ಬೈಸಿಕಲ್ಲುಗಳನ್ನು ದೇಶೀ ಸರಕಾರದ ಯಾವುದೇ ಸಹಾಯವಿಲ್ಲದೆ ನಮ್ಮ ದೇಶವೇ ಉತ್ಪಾದಿಸತೊಡಗಿತು. ನಮ್ಮ ಉದ್ಯಮಶಾಲಿಗಳು ಲೇವಾದೇವಿ ಹಾಗೂ ವಿಮಾ ಕ್ಷೇತ್ರಗಳನ್ನೂ ಪ್ರವೇಶಿಸಿದರು.

ಆದರೆ ಚೆನ್ನಾಗಿ ಸಜ್ಜುಗೊಂಡಿದ್ದ ಐರೋಪ್ಯ ಸಂಸ್ಥೆಗಳು ಪ್ರಬಲ ೈಪೋಟಿ ಹೂಡಿದವು. 1905ರಲ್ಲಿ ಮೊಹಮದ್ ಕಲಮಿಯಾನ್ ಬೆಂಗಾಲ್ ಸ್ಟೀಮ್ ನ್ಯಾವಿಗೇಶನ್ ಕಂಪನಿಯನ್ನು ಪ್ರಾರಂಭಿಸಿದಾಗ ರೋಪ್ಯ ನೌಕಾಯಾನ ಸಂಸ್ಥೆಗಳು ಪ್ರಯಾಣದ ದರವನ್ನು ಬಹಳವಾಗಿ



ಗ್ಗಿಸಿದವು. ಯೂರೋಪಿಯನ್ ಒಡೆತನದ ಸೆಣಬು ಕಾರ್ಖಾನೆಗಳು ್ವದೇಶೀ ಹಡಗುಗಳು ಸಾಗಿಸಿದ ಸರಕನ್ನು ಕೊಳ್ಳಲು ನಿರಾಕರಿಸಿದವು. ಂತ್ರಿಕ ತಿಳುವಿನ ಕೊರತೆ, ಬಂಡವಾಳದ ಇತಿಮಿತಿ, ಐರೋಪ್ಯ ಡೆತನದ ಸಂಸ್ಥೆಗಳಿಂದ ಕಡುತರವಾದ ಮತ್ತು ನ್ಯಾಯ ಸಮ್ಮತವಲ್ಲದ ೈಪೋಟಿಯ ದೆಸೆಯಿಂದ ಹಾಗೂ ಸರ್ಕಾರದ ಅನಾಸ್ಥೆಗಳೆಲ್ಲ ಒಂದುಗೂಡಿ ್ವದೇಶೀ ಉದ್ಯಮ ಸಾಹಸವನ್ನು ಅಡಗಿಸಲು ತೊಡಗಿದವು. ಹಲವಾರು ಬಗೆಯ ಉದ್ಯಮ ಸಾಹಸಗಳು ಮುರುಟಿಕೊಂಡವು. ಕೆಲವಷ್ಟೇ ುಳಿದುಕೊಂಡವು. ಹಲವಾರು ಅಡ್ಡಿಗಳಿದ್ದರೂ ದೇಶೀಯವಾದ ಸಂಸ್ಥೆಗಳೂ ತಲೆಎತ್ತಿದವು. ಇಂಥವುಗಳಲ್ಲಿ ಒಂದು ಜಮಶೇಟ್‌ಪುರದ ತಾತಾ ಐಯರ್ನ್ ಅಂಡ್ ಸ್ಟೀಲ್ ಕಂಪನಿ.

ಭಾರತೀಯರು ಅನ್ಯಾಯವನ್ನು ಎದುರಿಸಿ ಸೆಣೆಸಬಲ್ಲರೆಂಬುದನ್ನು ಸ್ವದೇಶೀ ಚಳುವಳಿ ರಾಜಕಾರಣ ರಂಗದಲ್ಲಿ ಸಾಧಿಸಿ ತೋರಿಸಿತು. ಭಾರತೀಯ ವಿಜ್ಞಾನಿಗಳು, ಇಂಜಿನಿಯರ್‌ಗಳು, ತಾಂತ್ರಿಕ ತಜ್ಞರು ಮತ್ತು ಶ್ರಮಜೀವಿಗಳು ಯುರೋಪಿನಲ್ಲಾಗಲಿ ಅಮೇರಿಕಾದಲ್ಲಾಗಲಿ ಇರಬಹುದಾದ ತಮ್ಮ ವೃತ್ತಿಬಂಧುಗಳಿಗಿಂತ ಕಡಿಮೆಯಾದವರಲ್ಲ ಎಂಬುದು ಆರ್ಥಿಕ ಕ್ಷೇತ್ರದಲ್ಲಿ ಸಂದೇಹದ ಎಳೆಗೂ ಎಡೆ ಇಲ್ಲದಂತೆ ಸ್ಥಾಪಿತವಾಗಿತ್ತು. ಹೀಗಿದ್ದೂ ಭಾರತ ಔದ್ಯೋಗಿಕವಾಗಿ ಹಿಂದುಳಿದಿತ್ತೆಂದರೆ ಈ ಸ್ಥಿತಿಯಲ್ಲಿಡುವುದೇ ಬ್ರಿಟಿಷ್ ಆಡಳಿತದ ಪ್ರಯತ್ನವಾಗಿತ್ತು. ರಾಷ್ಟ್ರ ಸ್ವತಂತ್ರವಾಗುವವರೆಗೆ ವಾಣಿಜ್ಯ–ಕೈಗಾರಿಕೆಗಳ ಏಳಿಗೆಯನ್ನು ಕಾಣಲು ಸಾಧ್ಯವಿಲ್ಲವೆಂಬುದನ್ನು ನಮ್ಮ ಉದ್ಯಮಶೀಲರು ತಿಳಿದರು. ಕೈಗಾರಿಕೆಯ ಮುನ್ನಡೆ ಮತ್ತು ಸಂಪದಭಿವೃದ್ಧಿಗೆ ಸ್ವಾತಂತ್ರ್ಯದ ಕಾಣಿಕೆ ಏನೆಂಬುದನ್ನು ತಿಳಿಯಬೇಕಾದರೆ ಬ್ರಿಟಿಷ್ ಆಡಳಿದಲ್ಲಿ ನಮ್ಮ ಉದ್ಯಮಗಳ ಸ್ಥಿತಿಗಳನ್ನು ಮತ್ತು ಸ್ವಾತಂತ್ರ್ಯದ ನಂತರ ಆಗಿರುವ ಸಾಧನೆಯನ್ನು ತೂಗಿನೋಡಬೇಕಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆತ್ಮಗೌರವ ತುಂಬಿದ ವಿವೇಕಾನಂದರು

ಭಾರತೀಯರಲ್ಲಿ ಸ್ವಾತಂತ್ರ್ಯದ ಬಗ್ಗೆ ಜಾಗೃತಿ ಮೂಡಿಸುವುದರಲ್ಲಿ ಸ್ವಾಮಿ ವಿವೇಕಾನಂದರು ಪ್ರಮುಖ ಪಾತ್ರ ವಹಿಸಿದರು. ಭರತಖಂಡವನ್ನು ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಎಡೆಬಿಡದೆ ಸಂಚರಿಸಿ 'ಏಳಿ ! ಎದ್ದೇಳಿ ! ಗುರಿಮುಟ್ಟುವವರೆಗೂ ನಿಲ್ಲದಿರಿ' ಎಂಬ ತಮ್ಮ ಸಿಂಹವಾಣಿಯಿಂದ ಜನತೆಯಲ್ಲಿ ಕೆಚ್ಚನ್ನೂ, ದಾಸ್ಯ ಸಂಕೋಲನೆಯನ್ನು ಕಿತ್ತೊಗೆಯಬಲ್ಲ ಪೌರುಷವನ್ನೂ ತುಂಬಿದರು. 1902ಕ್ಕೂ ಮೊದಲೇ ಮೊಳಗಿದ ಆ ವಾಣಿ, ವಿವೇಕಾನಂದರು ಕಾಲವಶರಾದಮೇಲೂ ಭಾರತೀಯರನ್ನು ಸ್ವಾತಂತ್ರ್ಯ ಚಳವಳಿಯಲ್ಲಿ ಹುಮ್ಮಸ್ಸಿನಿಂದ ಧುಮುಕುವಂತೆ ಪ್ರೇರೇಪಿಸಿತು.

ಸ್ವಾಮಿ ವಿವೇಕಾನಂದರ ಬರಹಗಳಿಂದ ಆಯ್ದ ಭಾಗಗಳು

ಪ್ರಸ್ತುತ ಜನತೆ ಎಂದೂ ಕರಗಿ ಹೋಗದ ಅಂಧಕಾರದಲ್ಲಿ ಆವೃತವಾಗಿದೆ. ಜಡತೆ ಹಾಗೂ ಮೌಢ್ಯಗಳು ಜನತೆಯನ್ನು ಸತ್ವಹೀನವಾಗಿಸಿವೆ. ಜನತೆಯಲ್ಲಿ ಯಾವುದೇ ಧ್ಯೇಯವಾಗಲೀ, ಸಾಹಸ ಪ್ರವೃತ್ತಿಯಾಗಲೀ, ಗುರಿಯೆಡೆಗೆ ಛಲದಿಂದ ಮುನ್ನುಗ್ಗುವ ಎದೆಗಾರಿಕೆಯಾಗಲೀ, ಸಂಕಷ್ಟಗಳನ್ನು ಎದುರಿಸುವ ಮನಃಸ್ಥೈರ್ಯವಾಗಲೀ, ದಾಸ್ಯದ ಸಂಕಲೆಗಳನ್ನು ಕಡಿದೊಗೆಯುವ ಪೌರುಷತ್ವವಾಗಲೀ ಇಲ್ಲವಾಗಿದೆ.

ನಾವೆಲ್ಲರೂ ಹೃದಯದಾರಿದ್ರ್ಯದಿಂದ ಬಳಲುತ್ತಿದ್ದೇವೆ. ಪ್ರೀತಿ, ವಿಶ್ವಾಸ, ಭರವಸೆ, ಮಮಕಾರಗಳಂಥ ಮಾನವೀಯ ಮೌಲ್ಯಗಳು ಕಣ್ಮರೆಯಾಗುತ್ತಿವೆ ; ಇದ್ದವರು ಇಲ್ಲದವರನ್ನು ಶೋಷಿಸುತ್ತಿದ್ದಾರೆ ; ಬಲಾಢ್ಯರು ಬಲಹೀನರನ್ನು ತುಳಿಯುತ್ತಿದ್ದಾರೆ. ಬಲಾಢ್ಯರ ಪಾದವನ್ನು ನಾಯಿಯಂತೆ ನೆಕ್ಕುವ ನಾಯಕಪೂಜಕರೂ ನಮ್ಮಲ್ಲಿದ್ದಾರೆ ; ತಮ್ಮೆಲ್ಲ ಸ್ವಾತಂತ್ರ್ಯಗಳನ್ನೂ ಬಲಿಗೊಟ್ಟು ಅಲ್ಪತೃಪ್ತಿಗಾಗಿ ದಾಸರಾಗುವ ಪ್ರವೃತ್ತಿ ನಮ್ಮನ್ನು ಸ್ವಾತಂತ್ರ್ಯದಿಂದ ವಂಚಿಸಿದೆ.

ಭಾರತೀಯತೆಯಲ್ಲಿರುವ ಶ್ರೀಮಂತಿಕೆಯನ್ನು ಕಂಡುಕೊಳ್ಳದ ನಾವು ಪಾಶ್ಚಾತ್ಯರನ್ನು ಜೀವನದ ಪ್ರತಿಯೊಂದು ಹಂತದಲ್ಲೂ ಅನುಕರಿಸಿ ನಮ್ಮನ್ನೇ ನಾವು ಅಧಃಪಾತಕ್ಕೆ ತಳ್ಳಿಕೊಳ್ಳುತ್ತಿದ್ದೇವೆ. ಕೇವಲ ಪ್ರಾಪಂಚಿಕ ಸುಖ ಲೋಲುಪರಾದ ವಸ್ತುನಿಷ್ಠ ಜೀವನಪ್ರಿಯರಾದ ಇಂಥ ಜನ ಉಣ್ಣಲು ಗಂಜಿಯೂ ಇಲ್ಲದ, ಇರಲು ಸೂರೂ ಇಲ್ಲದ ಮೈಗೆ ತೊಡಲು ತುಂಡು ಬಟ್ಟೆಯೂ ಇಲ್ಲದ ತಮ್ಮ ಅಸಂಖ್ಯಾತ ದೇಶಬಾಂಧವರನ್ನು ನೆನೆದಿದ್ದಾರೆಯೇ ?

......ಭಾರತ ! ಇಲ್ಲಿ ಭಾರತೀಯನೇ ಪರಕೀಯ ! ಏಕೆ ಹೀಗೆ ? ಅಂಧಾನುಕರಣೆ, ದಾಸ್ಯ ದೌರ್ಬಲ್ಯಗಳು, ಹೇಯ, ಅಮಾನುಷ, ಮನುಷ್ಯರು ಮನುಷ್ಯರನ್ನೇ ಹಿಂಸಿಸುವ ಕ್ರೌರ್ಯ, ಅಭಿಮಾನ ಶೂನ್ಯತೆ, ದೇಶಪ್ರೇಮ ವಿಹೀನತೆ– ಇವೆಲ್ಲಾ ತಾಂಡವವಾಡುತ್ತಿರುವಾಗ ವೀರರೂ, ಧೀರರೂ, ಶೂರರೂ ಪಡೆಯಬಹುದಾದ ಆ ಪವಿತ್ರವಾದ ಸ್ವಾತಂತ್ರ್ಯವನ್ನು ಹೇಗೆ ತಾನೇ ನಾವು ಪಡೆದೇವು ?......

......ಸ್ಪೃಶ್ಯ–ಅಸ್ಪೃಶ್ಯ, ಬಡವ–ಬಲ್ಲಿದ, ಜ್ಞಾನಿ–ಅಜ್ಞಾನಿ—ಹಾಗೂ ಮೇಲು–ಕೀಳು ಎಂಬ ತಾರತಮ್ಯ ಭಾವವನ್ನು ಹೊಡೆದೋಡಿಸಿ, "ಮೂಲತಃ ನಾವೆಲ್ಲಾ ಮನುಜರು, ನಾವೆಲ್ಲಾ ಭಾರತಾಂಬೆಯ ಪುತ್ರರು, ಅಂತೆಯೇ ನಾವೆಲ್ಲಾ ಸಹೋದರ ಸಹೋದರಿಯರು ಎಂದು ಅಭಿಮಾನದಿಂದ ಉದ್ಘೋಷಿಸೋಣ ; ದೇಶದ ಸ್ವಾತಂತ್ರ್ಯಕ್ಕಾಗಿ ನಮ್ಮನ್ನು ನಾವು ಅರ್ಪಿಸಿಕೊಳ್ಳೋಣ."

......ಅರೆಹೊಟ್ಟೆಯ ಪರಕು ಚಿಂದಿಯ ದೀನನೂ ನನ್ನ ಸಹೋದರನೇ. "ಇಲ್ಲಿನ ಭುವಿಯ ಕಣಕಣವೂ ನನಗೆ ಪವಿತ್ರ ಹಾಗೂ ಸ್ವರ್ಗ ಸಮಾನ. ಇಲ್ಲಿಯ ನೆಲ, ಜಲ, ಗಾಳಿ ನನಗೆ ಮಹಾಚೇತನಗಳು."

......ಭಾರತದ ಭವಿತವ್ಯವೇ ನನ್ನ ಭವಿತವ್ಯ. "ಈ ನಾಡಿನ ಶುಭೋದಯಕ್ಕಾಗಿ ಹಾಗೂ ನನ್ನ ಸೋದರ ಸೋದರಿಯರ ಒಳಿತಾಗಿ ಹೋರಾಡುವ ಸಾಮರ್ಥ್ಯವನ್ನೂ ಕೆಚ್ಚೆದೆಯನ್ನೂ ಕೊಡು" ಎಂದು ಮೊರೆಯಿಡು.

Sri Vidyabharathi Book Centre, Sringeri